

# ವೈಮಾನಿಕ ದಾಳಿಕೋರ ಸೀಳುಕಣ್ಣಿನ ಗೂಬೆ ನೊಣ

ಗಾಳಿಯಲ್ಲಿ ಹಾರಾಡುತ್ತಲೇ ಬೇಟೆಯಾಡಿ ಭಕ್ಷಿಸುವ ಈ ಕೀಟ, ತನ್ನ ವಿಶಿಷ್ಟ ಗಾತ್ರದ ಕಣ್ಣುಗಳಿಂದ ಗಮನಸೆಳೆಯುತ್ತದೆ.

■ ಶಶಿಧರಸ್ವಾಮಿ ಆರ್. ಹಿರೇಮಠ

ಇನ್ನೂ ಸೂರ್ಯ ಉದಯಿಸಿರಲಿಲ್ಲ. ನಮ್ಮ ಕೈತೋಟದಲ್ಲಿ ಒಣಗಿದ ಕಡ್ಡಿಯೊಂದರ ಮೇಲೆ ಕುಳಿತ ಕೀಟವೊಂದು ಚುರುಕಾಗಿ ಅತ್ತಿತ್ತ ಓಡಾಡುತ್ತಿದ್ದುದು ಗಮನಸೆಳೆಯಿತು. ದೂರದಿಂದ ನೋಡಿ ಏರೊಪ್ಲೇನ್ ಚಿಟ್ಟೆ ಇರಬೇಕೆಂದುಕೊಂಡೆ. ಹಾಗೇ ಹತ್ತಿರ ಹೋಗಿ ನೋಡಿದಾಗ ಅದು ‘ಗೂಬೆ ನೊಣ’ ಎಂಬುದು ಗೊತ್ತಾಯಿತು. ಇದೇನಿದು ವಿಚಿತ್ರ ಹೆಸರು ಎಂದು ಯೋಚಿಸುತ್ತಿದ್ದೀರಾ?

ಈ ಕೀಟದ ಎರಡು ಕಣ್ಣುಗಳು ತುಂಬಾ ದೊಡ್ಡದಾಗಿದ್ದು, ತಲೆಯ ಬಹುಭಾಗವನ್ನು ಕಣ್ಣುಗಳೇ ಆವರಿಸಿವೆ. ಆದಾಗ್ಯೂ ಪ್ರತಿ ಸಂಯುಕ್ತ ಕಣ್ಣು ಎರಡು ಹಾಲೆಗಳಾಗಿ ವಿಭಜನೆಯಾಗಿರುವಂತೆ ತೋರುತ್ತವೆ. ಬೇರೆ ಯಾವುದೇ ಕೀಟದಲ್ಲಿ ಈ ರೀತಿ ಕಂಡಿರಲಿಲ್ಲ. ಬಹುಶಃ ಈ ಕಣ್ಣುಗಳೇ ಈ ಕೀಟಕ್ಕೆ ‘ಗೂಬೆ ನೊಣ’ ಎಂಬ ಹೆಸರು ಬರಲು ಕಾರಣವಿರಬೇಕು.

ಈ ಹಿಂದೆ ಹನುಮನಮಟ್ಟಿ ಕೃಷಿ ವಿಜ್ಞಾನ ಕಾಲೇಜಿಗೆ ಹೋದಾಗ ಕೀಟ ವಿಜ್ಞಾನಿ ಡಾ. ಎಸ್.ಟಿ. ಪ್ರಭುರವರು ಇದರ ಬಗ್ಗೆ ಒಂದಷ್ಟು ಮಾಹಿತಿ ನೀಡಿದ್ದರು.

ಈ ಕೀಟ ಕಾಣಸಿಗುವುದು ಅಪರೂಪವೇ. ಇದರ ಮೀಸೆಗಳು ಕುಸ್ತಿ ಕಾಳಗದ ಜಟ್ಟಿಗಳಿರುವಂತೆ ಉದ್ದವಾಗಿ ತುದಿಯಲ್ಲಿ ಉಬ್ಬಿವೆ. ಉಬ್ಬಿದ ವಿಭಜಿತ ಸಂಯುಕ್ತ ಕಣ್ಣುಗಳು ಆಕರ್ಷಕವಾಗಿ ಕಾಣುತ್ತವೆ. ದೊಡ್ಡ ಕಣ್ಣುಗಳು ಹಾಗೂ ನಡವಳಿಕೆಯಿಂದ ಇದಕ್ಕೆ ‘ಗೂಬೆ ನೊಣ’ ಎಂಬ ಹೆಸರು ಅನ್ವರ್ಥಕ. ಸುಮಾರು 450 ಜಾತಿಗಳು ಅಸ್ತಿತ್ವದಲ್ಲಿದ್ದು, ಅವುಗಳ ಪೈಕಿ ಇದು ‘ಸೀಳುಕಣ್ಣಿನ ಗೂಬೆ ನೊಣ’ವಾಗಿತ್ತು.

‘ಸೀಳುಕಣ್ಣಿನ ಗೂಬೆ ನೊಣ’ಗಳನ್ನು ಸಾಮಾನ್ಯವಾಗಿ ‘ಗೂಬೆ ನೊಣ’ ಎಂದು ಕರೆಯುತ್ತಾರೆ. ಇಂಗ್ಲಿಷಿನಲ್ಲಿ ‘ಸ್ಲಿಟ್ ಐಡ್ ಔಲ್ ಫ್ಲೈ’ ಅಥವಾ ‘ಔಲ್ ಫ್ಲೈ’ ಎಂದು ಕರೆಯಲಾಗುತ್ತದೆ. ಸಂಧಿಪದಿಗಳ, ಕೀಟ ವರ್ಗದ, ನ್ಯೂರೋಪ್ಟೆರಾ ಗಣದ, ಅಸ್ಕಲಫಿಡೆ ಕುಟುಂಬಕ್ಕೆ ಸೇರಿವೆ.

‘ಅಸ್ಕಲಫಿಡೆ’ ಕುಟುಂಬವನ್ನು ಮೊದಲು 1842ರಲ್ಲಿ ಫ್ರೆಂಚ್ ಕೀಟಶಾಸ್ತ್ರಜ್ಞ ಜೂಲ್ಸ್ ಪಿಯರೆ ರಾಂಬರ್ ವಿವರಿಸಿದರು. ಈ ಹೆಸರು ಗ್ರೀಕ್‌ನ ಅಸ್ಕಲಫೊಸ್ (ಒಂದು ರೀತಿಯ ಗೂಬೆ)ನಿಂದ ಬಂದಿದೆ. ಗ್ರೀಕ್ ಪುರಾಣದಲ್ಲಿ, ‘ಅಸ್ಕಲಫೊಸ್’ ಭೂಗತ ಲೋಕದ ದೇವರು ಹೇಡಸ್‌ನ ಹಣ್ಣಿನ ತೋಟದ ಪಾಲಕನಾಗಿದ್ದನು. ದೇವತೆ ಡಿಮೀಟರ್ ಅವನನ್ನು ಗೂಬೆಯಾಗಿ ಪರಿವರ್ತಿಸಿದಳು ಎಂಬ ಕಥೆಯಿದೆ.



ಈ ಕೀಟದ ಎದೆಗೂಡಿನ ಭಾಗವು ಕಂದು ಬಣ್ಣದ ಕೂದಲಿನಿಂದ ಆವೃತವಾಗಿದ್ದು, ಬದಿಗಳಲ್ಲಿಯ ಕುಹರದ ಮೇಲ್ಮೈಯಲ್ಲಿ ಹಳದಿ ಗುರುತುಗಳನ್ನು ಮತ್ತು ಹಿಂಭಾಗದಲ್ಲಿ ಹಳದಿ ಪಟ್ಟೆಯನ್ನು ಹೊಂದಿದೆ. ತಲೆ ಹಳದಿ ಬಣ್ಣದ್ದಾಗಿದ್ದು, ಬಿಳಿ ಕೂದಲಿನಿಂದ ಆವೃತವಾಗಿದೆ. ಗ್ರಹಣಾಂಗ (ಆಂಟೆನಾ)ಗಳು ತುಕ್ಕು ಕೆಂಪು ಬಣ್ಣದ್ದಾಗಿವೆ. ರೆಕ್ಕೆಗಳು ಅಷ್ಟು ಉದ್ದವಾಗಿರುವುದಿಲ್ಲ. ಉದ್ದವಾದ ಹೊಟ್ಟೆಯು ಕೇಸರಿ ಹಳದಿ ಬಣ್ಣದ್ದಾಗಿದ್ದು, ಹಿಂಭಾಗದಲ್ಲಿ ಎರಡು ಕಪ್ಪು ಪಟ್ಟೆಗಳು ಮತ್ತು ಬದಿಗಳಲ್ಲಿ ಹಲವಾರು ಕಪ್ಪು ಪಟ್ಟೆಗಳಿವೆ. ಕಾಲುಗಳು ಹಳದಿ ಬಣ್ಣದಲ್ಲಿರುತ್ತವೆ.

ಇದರ ಪಾರದರ್ಶಕ ರೆಕ್ಕೆಗಳು ಬಹುನಾಳವ್ಯೂಹಗಳಿಂದ ಕೂಡಿವೆ. ಗೂಬೆ ನೊಣಗಳು ಇತರ ಕೀಟಗಳನ್ನು ವೈಮಾನಿಕವಾಗಿ ಹಿಡಿದು ತಿನ್ನುವ ಪರಭಕ್ಷಕಗಳಾಗಿವೆ. ಗಾಳಿಯಲ್ಲಿ ಹಾರಾಡುತ್ತಲೇ ಬೇಟೆಯಾಡುವ ಚತುರ ಕೀಟ. ತೊಂದರೆಗೊಳಗಾದಾಗ ಕೆಲ ಜಾತಿಯ ಗೂಬೆ ನೊಣಗಳು ಶತ್ರುಗಳಿಂದ ತಪ್ಪಿಸಿಕೊಳ್ಳಲು ಗಾಢವಾದ ಕಸ್ತೂರಿಯಂತಹ ಸುವಾಸನಾಯುಕ್ತ ರಾಸಾಯನಿಕವನ್ನು ಬಿಡುಗಡೆ ಮಾಡುತ್ತವೆ. ಇನ್ನೂ ಕೆಲ ಜಾತಿಯವು ಸೂರ್ಯಾಸ್ತ ಮತ್ತು ಮುಂಜಾನೆ ಹೆಚ್ಚು ಚಟುವಟಿಕೆಯಿಂದ ಕೂಡಿರುತ್ತವೆ. ಹಗಲಿನಲ್ಲಿ ದೇಹ ಮತ್ತು ಮೀಸೆಗಳನ್ನು ಸಸ್ಯಗಳ ಕಾಂಡಕ್ಕೆ ಒತ್ತಿ ಹಿಡಿದು ಕುಳಿತು ವಿಶ್ರಾಂತಿ ಪಡೆಯುತ್ತವೆ.

ಪ್ರತಿಕ್ರಿಯಿಸಿ: feedback@sudha.co.in